2. ಪ್ರಕಟಣೆ

ವಿಷಯ: ಅಧ್ಯಕ್ಷರ ನಾಮನಿರ್ದೇಶನ

ಹಂಗಾಮಿ ಅಧ್ಯಕ್ಷರು: ಕರ್ನಾಟಕ ವಿಧಾನಸಬೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಪ್ರಕಾರ ಈ ಕೆಳಕಂಡ ಮಾನ್ಯ ವಿಧಾನಸಭಾ ಸದಸ್ಯರುಗಳನ್ನು. ಅಧ್ಯಕ್ಷತೆ ವಹಿಸುವವರ ಪಟ್ಟಿಗೆ ನಾಮ ನಿರ್ದೇಶನ ಮಾಡಿದೆ.

1. ಶ್ರೀ ಎನ್. ಯೋಗಿಶ್ ಭಟ್

2. ಶ್ರೀ ಬೆಲ್ಲದ್ ಚಂದ್ರಕಾಂತ್

3. ಶ್ರೀ ಅಪ್ಪಾಜಿ ಆಲಿಯಾಸ್ ಚನ್ನಬಸವರಾಜ್ ಶಂಕರ್‌ಗೌಡ ನಾಡಗೌಡ

4. ಶ್ರೀ ಹೆಚ್.ಕೆ ಕುಮಾರಸ್ವಾಮಿ

5. ಡಾ: ಜಿ. ಪರಮೇಶ್ವರ್

3. ಸದಸ್ಯರ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

ಹಂಗಾಮಿ ಅಧ್ಯಕ್ಷರು : ಕಾರ್ಯದರ್ಶಿಯವರು ಈಗ ಮಾನ್ಯ ಸದಸ್ಯರುಗಳ ಹೆಸರನ್ನು ಕರೆಯಬಹುದು.

ಶ್ರೀ ಎಸ್.ಬಿ. ಪಾಟೀಲ್ (ಕಾರ್ಯದರ್ಶಿ(ಪ್ರ). ಕರ್ನಾಟಕ ವಿಧಾನಸಭೆ) ; ಮಾನ್ಯ ಸಭಾಧ್ಯಕ್ಷರೇ. ತಮ್ಮ ಅಪ್ಪಣೆ ಪಡೆದು ಈಗ ಪ್ರಮಾಣ ವಚನ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಗುವುದು. ಮೊದಲಿಗೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಶ್ರೀ ಬಿ.ಎಸ್. ಯಡಿಯೂರಪ್ಪ ಎಂಬ ಹೆಸರಿನವನಾದ ನಾನು ವಿಧಾನಸಭೆಯ ಸದಸ್ಯನಾಗಿ ನಿರ್ವಾಚನ ಹೊಂದಿದವನಾಗಿ ವಿಧಿದ್ವಾರ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ. ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ. ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ. ನಾನು

ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ರೈತರ ಹೆಸರಿನ ಮೇಲೆ. ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ.

ಚುನಾಯಿತರಾದ ಈ ಕೆಳಕಂಡ ಸದಸ್ಯರು ಭಗವಂತನ ಹೆಸರಿನ ಮೇಲೆ/ ಸತ್ಯ ನಿಷ್ಠೆಯ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕರಿಸಿದರು.

ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣವಚನ ಸ್ವೀಕರಿಸಿದ ಭಾಷೆ
ಶ್ರೀ ಮಲ್ಲಿಕಾರ್ಜುನ ಖರ್ಗೆ	ಚಿತ್ತಾಪುರ	ಕನ್ನಡ
ಶ್ರೀ ಎಸ್. ಸುರೇಶ್ ಕುಮಾರ್	ರಾಜಾಜಿನಗರ	ಕನ್ನಡ
ಶ್ರೀ ಕೆ.ಎಸ್. ಈಶ್ವರಪ್ಪ	ಶಿವಮೊಗ್ಗ ನಗರ	ಕನ್ನಡ
ಶ್ರೀ ಆರ್ ಅಶೋಕ್	ಪದ್ಮನಾಭನಗರ	ಕನ್ನಡ
ಶ್ರೀ ಗೋವಿಂದ ಎಂ. ಕಾರಜೋಳ	ಮುದೋಳ	ಕನ್ನಡ
ಶ್ರೀ ಸಿ.ಎಂ. ಉದಾಸಿ	ಹಾನಗಲ್	ಕನ್ನಡ
ಶ್ರೀ ಎಸ್.ಎಂ. ರವೀಂದ್ರನಾಥ್	ದಾವಣಗೆರೆ ಉತ್ತರ	ಕನ್ನಡ
ಶ್ರೀ ಬಸವರಾಜ ಬೊಮ್ಮಾಯಿ	ಶಿಗ್ಗಾಂವ್	ಕನ್ನಡ
ಶ್ರೀಮತಿ ಶೋಭಾ ಕರಂದ್ಲಾಜೆ	ಯಶವಂತಪುರ	ಕನ್ನಡ
ಶ್ರೀ ಜಿ. ಕರುಣಾಕರರೆಡ್ಡಿ	ಹರಪನಹಳ್ಳಿ	ಕನ್ನಡ
ಶ್ರೀ ರೇವುನಾಯಕ್ ಬೆಳಮಗಿ	ಗುಲ್ಬರ್ಗ(ಗ್ರಾಮಾಂತರ)	ಕನ್ನಡ
ಶ್ರೀ ಬಿ.ಎನ್. ಬಚ್ಚೇಗೌಡ	ಹೊಸಕೋಟೆ	ಕನ್ನಡ
ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ	ಶಿರಸಿ	ಕನ್ನಡ
ಶ್ರೀ ಲಕ್ಷ್ಮಣ ಸಂಗಪ್ಪ ಸವದಿ	ಅಥಣಿ	ಕನ್ನಡ
ಶ್ರೀ ಕೃಷ್ಣ ಜಿ. ಪಾಲೇಮಾರ್	ಮಂಗಳೂರು ಉತ್ತರ	ಕನ್ನಡ

ಶ್ರೀ ಅರವಿಂದ ಲಿಂಬಾವಳಿ	ಮಹದೇವಪುರ	ಕನ್ನಡ
ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ	ಬೀಳಗಿ	ಕನ್ನಡ
ಶ್ರೀ ಜಗದೀಶ್ ಶೆಟ್ಟರ್	ಹುಬ್ಬಳ್ಳಿ–ದಾರವಾಡ(ಸೆ)	ಕನ್ನಡ
ಶ್ರೀ ನರೇಂದ್ರಸ್ವಾಮಿ	ಪಿ.ಎಂ.ನರೇಂದ್ರಸ್ವಾಮಿ	ಕನ್ನಡ
ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ	ಬಸವನ ಬಾಗೇವಾಡಿ	ಕನ್ನಡ
ಶ್ರೀ ಬಿ. ಶ್ರೀರಾಮುಲು	ಬಳ್ಳಾರಿ(ಗ್ರಾಮಾಂತರ)	ಕನ್ನಡ
ಶ್ರೀ ಕೃಷ್ಣಯ್ಯ ಶೆಟ್ಟಿ	ಮಾಲೂರು	ಕನ್ನಡ
ಶ್ರೀ ಹೆಚ್. ಹಾಲಪ್ಪ	ಸೊರಬ	ಕನ್ನಡ
ಶ್ರೀ ಗೂಳಿಹಟ್ಟಿ ಡಿ.ಶೇಖರ್	ಹೊಸದುರ್ಗ	ಕನ್ನಡ
ಶ್ರೀ ಶಿವರಾಜ ಸಂಗಪ್ಪ ತಂಗಡಗಿ	ಕನಕಗಿರಿ	ಕನ್ನಡ
ಶ್ರೀ ವೆಂಕಟರವಣಪ್ಪ	ಪಾವಗಡ	ಕನ್ನಡ
ಶ್ರೀ ಎನ್. ಯೋಗೀಶ್ ಭಟ್	ಮಂಗಳೂರು ದಕ್ಷಿಣ	ಕನ್ನಡ
ಶ್ರೀ ಅಪ್ಪಾಜಿ ಅಲಿಯಾಸ್ ಚನ್ನಬಸವರಾಜ್ ಎಸ್. ನಾಡಗೌಡರ್	ಮುದ್ದೇಬಿಹಾಳ	ಕನ್ನಡ
ಶ್ರೀ ಹೆಚ್.ಕೆ. ಕುಮಾರಸ್ವಾಮಿ	ಸಕಲೇಶಪುರ	ಕನ್ನಡ
ಶ್ರೀ ಅಭಯ ಪಾಟೀಲ	ಬೆಳಗಾವಿ ದಕ್ಷಿಣ	ಕನ್ನಡ
ಶ್ರೀ ಕೆ. ಅಭಯಚಂದ್ರ ಜೈನ್	ಮೂಡಬಿದರೆ	ಕನ್ನಡ
ಶ್ರೀ ಐಹೊಳೆ ದುಯೋಧನ ಮಹಾಲಿಂಗಪ್ಪ	ರಾಯಬಾಗ	ಕನ್ನಡ
ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ	ಕುಷ್ಟಗಿ	ಕನ್ನಡ
ಶ್ರೀ ಅಮರೇಶ್	ಮುಳಬಾಗಿಲು	ಕನ್ನಡ
ಶ್ರೀ ಆನಂದಸಿಂಗ್	ವಿಜಯನಗರ(ಬಳ್ಳಾರಿ)	ಕನ್ನಡ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು	ಹೆಬ್ಬಾಳ	ಕನ್ನಡ
ಶ್ರೀ ಎಂ.ಪಿ. ಅಪ್ಪಚ್ಚು ರಂಜನ್	ಮಡಿಕೇರಿ	ಕನ್ನಡ
ಶ್ರೀ ಡಿ. ಸುಧಾಕರ	ಹಿರಿಯೂರು	ಕನ್ನಡ
ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್	ಹುಬ್ಬಳ್ಳಿ-ಧಾರವಾಡ ಪಶ್ಚಿಮ	ಕನ್ನಡ

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರ

ವಿಷಯ: ಪ್ರಮಾಣವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ನೋಡುತ್ತಿದ್ದೇನೆ. ನಾನು ಇಲ್ಲಿ 9 ಸಲ ಶಪಥವಿಧಿ ಗ್ರಹಣ ಮಾಡಿದ್ದೇನೆ. ಯಾವಾಗಲೂ ಕೂಡ ಸಂವಿಧಾನಬಾಹಿರವಾಗಿ ಯಾರೂ ಹೇಳುವುದಿಲ್ಲ. ಇವತ್ತು ನಾನು ಗಮನಿಸುತ್ತಿದ್ದೇನೆ. ಒಬ್ಬರು ಹೆಬ್ಬಾಳ ಜನತೆಯ ಹೆಸರಿನಲ್ಲಿ. ಮತ್ತೊಬ್ಬರು ಇನ್ಯಾರದೋ ಹೆಸರಿನಲ್ಲಿ. ಮಗದೊಬ್ಬರು ತಂದೆ-ತಾಯಿ ಹೆಸರಿನ ಮೇಲೆ. ಈ ರೀತಿ ಪ್ರಮಾಣವಚನ ಸ್ವೀಕರಿಸುವುದು ಸರಿಯಿಲ್ಲ. ಚಟುವಟಿಕೆಗಳು ಚುನಾವಣೆಯಲ್ಲಿ ಸಂವಿಧಾನಬಾಹಿರದಲ್ಲಿ ಆಗಲಿ. ಕನಿಷ್ಟ ವಿಧಾನಸೌಧದಲ್ಲಾದರೂ ಸಂವಿಧಾನಬದ್ಧವಾಗಿ ನಡೆದುಕೊಳ್ಳೋಣವೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಹಂಗಾಮಿ ಅಧ್ಯಕ್ಷರು: ಈಗಾಗಲೇ ಪ್ರಮಾಣವಚನ ಹೇಗೆ ಸ್ವೀಕರಿಸಬೇಕೆಂದು ಒಂದು format ಅನ್ನು ಕೊಡಲಾಗಿದೆ. ಅದರ ಪ್ರಕಾರ ಸ್ವೀಕರಿಸಲಾಗಿದೆ. ಆದರೆ. ಗೌರವಾನ್ವಿತ ಸದಸ್ಯರು ಕೆಲವರು ಅಭಿಮಾನವಿಟ್ಟು ಈ ರೀತಿ ಮಾಡುತ್ತಿದ್ದಾರೆ. ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಭಿಮಾನ ಇರಬಹುದು. ನಿಮ್ಮ ಪ್ರೀತಿ ಇರಬಹುದು. ನಿಮ್ಮ ಶ್ರದ್ಧೆ ಇರಬಹುದು. ಅದಕ್ಕೆ ಯಾರೂ ಅಡ್ಡ ಬರುವುದಿಲ್ಲ. ಆದರೆ ಸಂವಿಧಾನವೆನ್ನುವುದು ಇದೆ. ನೀವು format ಕೊಟ್ಟಿದ್ದೀರಿ. ಆ format ಪ್ರಕಾರ ನಾವು ಓದತಕ್ಕಂಥದ್ದು. ಹೇಳತಕ್ಕಂಥದ್ದು ಉಚಿತ. ಏಕೆಂದರೆ. you are creating a precedent. ನಾವಿಲ್ಲಿ ಏನು ಮಾಡುತ್ತೇವೆ. ಅದನ್ನು ಬೇರೆಯವರು ನೋಡುತ್ತಾರೆ. ಅದನ್ನೇ ಅನುಕರಣೆ ಮಾಡುತ್ತಾರೆ. ದಯವಿಟ್ಟು format ಪ್ರಕಾರ ಹೋಗುವುದು ಎಲ್ಲರಿಗೂ ಒಳ್ಳೆಯದು. ಏನಾಯಿತೆಂದರೆ. ಮಾನ್ಯ ಮುಖ್ಯಮಂತ್ರಿಗಳೇ ಅದನ್ನು ಪ್ರಾರಂಭ ಮಾಡಿದ್ದಾರೆ. Head Master ರವರೇ ಹಾಗೆ ಮಾಡಿದ